# ಪತ್ತೆದಾರಿಯಾಗುವ ಆಸೆಯಲ್ಲಿ ಜಯಾ!



ಮದುವೆ ಆಯಿತೆಂದರೆ ಮಹಿಳಾ ಕಲಾವಿದರ ನಟನೆಯ ಕ್ಯಾರಿಯರ್ ಮುಕ್ತಾಯವಾಯ್ತು ಎಂಬುದೊಂದು ಅಘೋಷಿತ ನಿಯಮ ಬಣ್ಣದ ಲೋಕದಲ್ಲಿ ತೀರಾ ಇತ್ತೀಚೆಗಿನವರೆಗೂ ಇತ್ತು. ಈಗಲೂ ಸಿನಿಮಾರಂಗ ಈ ಮನಸ್ಥಿತಿಯಿಂದ ಪೂರ್ತಿ ಹೊರಬಂದಿಲ್ಲ. ಆದರೆ ಹಲವು ಮಹಿಳಾಕಲಾವಿದರು ಈ ಮಾತನ್ನು ಸುಳ್ಳಾಗಿಸುತ್ತಿದ್ದಾರೆ. ತಮ್ಮ ಪ್ರತಿಭೆಗೆ ಮದುವೆಯೆಂಬುದು ತಡೆಗೋಡೆಯಲ್ಲ ಎಂದು ಸಾಬೀತುಗೊಳಿಸುತ್ತಿದ್ದಾರೆ. ಆದರೆ ಜಯಾ ಎಂಬ ದಾವಣಗೆರೆಯ ಕಲಾವಿದೆ ಇದಕ್ಕಿಂತ ಒಂದು ಹೆಜ್ಜೆ ಮುಂದೆಯೇ ಇದ್ದಾರೆ. ಮದುವೆಯಾಗಿ, ಮಕ್ಕಳನ್ನೂ ಬೆಳೆಸಿದ ಮೇಲೆಯೇ ನಟನೆಯನ್ನು ಆರಂಭಿಸಿದ್ದಾರೆ.

ಜಯಾ ಹುಟ್ಟಿ ಬೆಳೆದಿದ್ದೆಲ್ಲ ದಾವಣಗೆರೆಯಲ್ಲಿ. ಮಾನಸಗಂಗೋತ್ರಿಯಲ್ಲಿ ಹಿಂದಿ ಎಂ.ಎ. ಮಾಡಿದ ಅವರು ಅಲ್ಲಿಯೇ ಕೆಲ ಕಾಲ ಉಪನ್ಯಾಸಕಿಯಾಗಿಯೂ ಕೆಲಸ ಮಾಡಿದರು. ಆಗಲೇ ಅವರ ಆಸಕ್ತಿಗಳು ಬಹುಮುಖಿಯಾಗಿ ಚಿಗುರಿಕೊಂಡಿದ್ದವು. ಭರತನಾಟ್ಯ ಕಲಿತರು, ವೀಣೆ ಕಲಿತರು, ಯೋಗವನ್ನು ಕಲಿತು ಜಿಲ್ಲಾಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನವನ್ನೂ ಪಡೆದರು.

ಮದುವೆಯಾದ ಮೇಲೆ ಬೆಂಗಳೂರಿಗೆ ಅವರ ಬದುಕು ಸ್ಥಳಾಂತರಗೊಂಡಿತು. ಪತಿ ಕಂಪನಿಯೊಂದರ ಸಿಇಓ. ಮದುವೆಯ ನಂತರ ಗಂಡನ ಸಹಾಯಕ್ಕೆ ನಿಂತರು. ಬಿಡುವಿನ ವೇಳೆಯಲ್ಲಿ ಬೈಕ್ ರೈಡ್ ಮಾಡುವುದು ಅವರಿಗೆ ಖುಷಿ ಕೊಡುವ ಹವ್ಯಾಸ. ನಟನೆಯ ಬಗ್ಗೆ ಆಸಕ್ತಿ, ಒಲವು ಇದ್ದಿದ್ದರೂ ಅವಕಾಶಗಳನ್ನು ಹೇಗೆ ಪಡೆದುಕೊಳ್ಳುವುದು ಎಂಬ ಅರಿವಿರಲಿಲ್ಲ.

2018ರಲ್ಲಿ ಬೆಂಗಳೂರಿನ ಒಂದು ಸೌಂದರ್ಯ ಸ್ಪರ್ಧೆಯಲ್ಲಿ 'ಸಾಂಸ್ಕೃತಿಕ ಸುಂದರಿ' ಎಂಬ ಪಟ್ಟ ದೊರೆತ ಮೇಲೆ ಅವರಿಗೆ ನಾನೂ ಯಾಕೆ ನಟನೆಗೆ ಪ್ರಯತ್ನಿಸಬಾರದು ಎಂಬ ಭಾವ ಬಲವಾಗಿ ಬೇರೂರಿದ್ದು. ಅದಕ್ಕೆ ಪೂರಕವೆಂಬಂತೆ 'ಮಿಥುನ ರಾಶಿ' ಎಂಬ ಧಾರಾವಾಹಿಯಲ್ಲಿ ಒಂದು ಪಾತ್ರದಲ್ಲಿ ನಟಿಸುವ ಅವಕಾಶ ಸಿಕ್ಕಿತು. ಅಂದುಕೊಂಡ ದಾರಿಯಲ್ಲಿ ಸಾಗುವ ಅವಕಾಶ ಸಿಗುವಾಗ ಬಿಡಲು ಸಾಧ್ಯವೇ? ಹಿಂದೆ ಮುಂದೆ ನೋಡದೆ ಧಾರಾವಾಹಿಯಲ್ಲಿ ನಟಿಸಿದರು. ಆ ಧಾರಾವಾಹಿಯಿಂದ 'ಬ್ರಹ್ಮಗಂಟು' ಎಂಬ ಇನ್ನೊಂದು ಧಾರಾವಾಹಿಯಲ್ಲಿ ನಟಿಸುವ ಅವಕಾಶ ಸಿಕ್ಕಿತು. 'ಕಾವೇರಿ' ಅವರು ನಟಿಸಿದ ಮತ್ತೊಂದು ಧಾರಾವಾಹಿಯ ಹೆಸರು.

ಜಯಾ ಕಿರುತೆರೆಯಿಂದ ಹಿರಿತೆರೆಗೆ ಜಿಗಿದಿದ್ದು 'ಮುಂದೊಂದಿನ' ಎಂಬ ಸಿನಿಮಾದ ಮೂಲಕ. ಅದಾದ ನಂತರ 'ಜೀವನವೇ ನಾಟಕ ಸ್ವಾಮಿ' ಎಂಬ ಸಿನಿಮಾದಲ್ಲಿ ರಿಯಾಲಿಟಿ ಷೋ ಜಡ್ಜ್ ಪಾತ್ರದಲ್ಲಿ ನಟಿಸುವ ಅವಕಾಶ ಸಿಕ್ಕಿತು. ಈಗಾಗಲೇ ಹತ್ತು ಸಿನಿಮಾದಲ್ಲಿ ನಟಿಸಿರುವ ಜಯಾ ಅವರಿಗೆ ಹಲವು ಹೊಸ ಸಿನಿಮಾಗಳಲ್ಲಿಯೂ ನಟಿಸುವ ಅವಕಾಶ ಒದಗಿಬರುತ್ತಿದೆ.

'ಎರಡು ಪ್ಯಾನ್ ಇಂಡಿಯಾ ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಒಂದರಲ್ಲಿ ವಿಲನ್ ಆಗಿ ನಟಿಸಿದ್ದೇನೆ' ಎಂದು ಖುಷಿಯಲ್ಲಿ ಹೇಳಿಕೊಳ್ಳುವ ಅವರಿಗೆ ನಟನೆಯ ಮೂಲಕ ಜನರ ಕಣ್ಣಲ್ಲಿ ಗುರ್ತಿಸಿಕೊಳ್ಳುವಂತಾಗಿದ್ದು ಖುಷಿ ಕೊಡುತ್ತಿದೆ.

ಜಯಾ, ತಮ್ಮ ಪಾಲಿಗೆ ಯಾವುದೇ ಪಾತ್ರ ಬಂದರೂ, ಅದು ಎಷ್ಟೇ ಚಿಕ್ಕದಾಗಿದ್ದರೂ ಅದರ ಕುರಿತು ಅಧ್ಯಯನ ಮಾಡುತ್ತಾರಂತೆ. 'ನನ್ನ ಪಾತ್ರಕ್ಕೆ ಹೋಲಿಕೆಯಾಗುವ ಪಾತ್ರಗಳಿರುವ ಸಿನಿಮಾಗಳನ್ನು ನೋಡುತ್ತೇನೆ. ಅಂಥ ವ್ಯಕ್ತಿಗಳು ರಿಯಲ್ ಲೈಫ್‌ನಲ್ಲಿಯೂ ಸಿಗುತ್ತಾರಾ ಎಂದು ಹುಡುಕಿ ಅವಲೋಕನ ಮಾಡುತ್ತೇನೆ. ಪಾತ್ರದ ಲುಕ್ ಬಗ್ಗೆಯೂ ಸಾಕಷ್ಟು ಯೋಚಿಸುತ್ತೇನೆ' ಎನ್ನುವ ಅವರಿಗೆ ಪತ್ತೆದಾರಿಯ ಪಾತ್ರದಲ್ಲಿ ನಟಿಸಬೇಕು ಎಂಬ ಹೆಬ್ಬಯಕೆಯೂ ಇದೆ. ಅಂಥದ್ದೊಂದು ಅವಕಾಶ ಸದ್ಯದಲ್ಲಿಯೇ ಕೂಡಿಬರಲಿದೆ ಎಂಬ ಭರವಸೆಯಲ್ಲಿ ಅವರು ಕಾಯುತ್ತಿದ್ದಾರೆ. ■

# 21 ಗಂಟೆಯ ತನಿಖೆ!

ನಟನೆ ಮತ್ತು ನಿರ್ಮಾಣ ಎರಡರಲ್ಲಿಯೂ ಗೆಲುವಿನ ಸಹಿ ಹಾಕಿರುವ ಧನಂಜಯ್ ಕೈಯಲ್ಲೀಗ ಸಾಕಷ್ಟು ಸಿನಿಮಾಗಳಿವೆ. ಒಂದರ ಹಿಂದೆ ಇನ್ನೊಂದು ಸಿನಿಮಾಗಳು ಘೋಷಣೆಯೂ ಆಗುತ್ತಿವೆ. ಅರೆ ಎಷ್ಟೊಂದು ಸಿನಿಮಾಗಳಿಗೆ ಇವರು ಸಹಿ ಹಾಕುತ್ತಿದ್ದಾರಲ್ಲಾ ಎಂದು ಅಚ್ಚರಿಗೊಳ್ಳುವ ಹೊತ್ತಿಗೆ, ಅವರು ನಟಿಸಿರುವ 'ಟ್ವೆಂಟಿ ಒನ್ ಅವರ್ಸ್' ಎಂಬ ಹೆಸರಿನ ಸಿನಿಮಾ ಬಿಡುಗಡೆಗೇ ಸಜ್ಜಾಗಿದೆ!

ಸದ್ದಿಲ್ಲದೇ ಈ ಸಿನಿಮಾದ ಚಿತ್ರೀಕರಣ ಮುಗಿಸಲಾಗಿದೆ. ಧನಂಜಯ್ ಅವರ ಎಷ್ಟೋ ಸ್ನೇಹಿತರಿಗೇ ಈ ಸಿನಿಮಾ ಬಗ್ಗೆ ತಿಳಿದಿರಲಿಲ್ಲವಂತೆ. ಕೆ.ಆರ್.ಜಿ. ಸ್ಟುಡಿಯೋಸ್ ಮೂಲಕ ಬಿಡುಗಡೆಯಾಗುತ್ತಿರುವ ಈ ಸಿನಿಮಾದ ಟ್ರೇಲರ್ ಅನ್ನು ಚಿತ್ರತಂಡ ಬಿಡುಗಡೆ ಮಾಡಿದೆ. ಇದೇ ತಿಂಗಳ 21ರಂದು ತೆರೆಗೂ ಬರಲಿದೆಯಂತೆ.




ಮೊದಲ ಲಾಕ್‌ಡೌನ್ ನಂತರ ಈ ಸಿನಿಮಾ ಚಿತ್ರೀಕರಣ ಮಾಡಲಾಗಿದೆಯಂತೆ. ಮಲಯಾಳಿ ಹುಡುಗಿಯೊಬ್ಬಳು ಬೆಂಗಳೂರಿಗೆ ಬಂದು ಕಾಣೆಯಾಗುತ್ತಾಳೆ. ಅವಳ ಹುಡುಕಾಟದ ಸುತ್ತಲೇ ಸಿನಿಮಾ ಕಥೆ ಬೆಳೆಯುತ್ತದೆ. ಧನಂಜಯ್ ಈ ಸಿನಿಮಾದಲ್ಲಿ ತನಿಖಾಧಿಕಾರಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಕರ್ನಾಟಕ ಮತ್ತು ಕೇರಳ ಎರಡೂ ಜಾಗದಲ್ಲಿ ನಡೆಯುವ ಈ ಕಥೆ ಕನ್ನಡ ಮತ್ತು ಮಲಯಾಳಂ ಎರಡೂ ಭಾಷೆಗಳಲ್ಲಿ ಬಿಡುಗಡೆಯಾಗುತ್ತಿದೆ. ಮೊದಲು ಕನ್ನಡದಲ್ಲಿ ಬಿಡುಗಡೆಯಾಗಿ ಕೆಲ ಸಮಯದ ನಂತರ ಮಲಯಾಳಂನಲ್ಲಿ ಬಿಡುಗಡೆ ಮಾಡುವ ಆಲೋಚನೆಯಲ್ಲಿ ಚಿತ್ರತಂಡವಿದೆ. ಕರ್ನಾಟಕ ಮೂಲದ ಆದರೆ ಈಗ ಕೇರಳದಲ್ಲಿ ವಾಸವಿರುವ ಜೈಶಂಕರ್ ಪಂಡಿತ್ ಈ ಸಿನಿಮಾವನ್ನು ನಿರ್ದೇಶಿಸಿದ್ದಾರೆ. ದುರ್ಗಾ ಕೃಷ್ಣ, ಸುದೇವ್ ನಾಯರ್, ರಾಹುಲ್ ಮಾಧವ್ ಮುಖ್ಯಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ■